ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ರಾಕೃವಿಯೊ ಪ್ರಾಯೋಜಿತ

ತೋಟಗಾರಿಕಾ ವ್ಯವಹಾರ ಹಾಗೂ ರಫ್ತು ಜ್ಞಾನ ಕೇಂದ್ರ

# ಕೃಷಿ ಉತ್ಪನ್ನಗಳ ಒತ್ತಡಾತ್ಮಕ (ಅನಿವಾರ್ಯ) ಮಾರಾಟದ ಸಂದರ್ಭಗಳು ಹಾಗೂ ಪರಿಹಾರಗಳು


ಸಂಗ್ರಹಣೆ :

ಡಾ. ಸಿ.ಬಿ.ಕೌಜಲಗಿ

ಡಾ. ತನ್ವೀರ್ ಅಹ್ಮದ್

ಡಾ. ಶ್ರೀಪಾದ ವಿಶ್ವೇಶ್ವರ

ಡಾ. ಸಚಿನ್ ನಂದಿಮಠ

ಶ್ರೀ. ಸುಧೀಶ್ ಎನ್. ಕುಲಕರ್ಣಿ





ಕೃಷಿ ಅರ್ಥಶಾಸ್ತ್ರ ವಿಭಾಗ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,

ಉದ್ಯಾನಗಿರಿ, ಬಾಗಲಕೋಟ

## ಕೃಷಿ ಉತ್ಪನ್ನಗಳ ಒತ್ತಡಾತ್ಮಕ (ಅನಿವಾರ್ಯ) ಮಾರಾಟದ ಸಂದರ್ಭಗಳು ಹಾಗೂ ಪರಿಹಾರಗಳು

**ಒತ್ತಡಾತ್ಮಕ ಮಾರಾಟದ ಸಂದರ್ಭಗಳು :**

- ಕೃಷಿ ಉತ್ಪನ್ನಗಳು ಕೊಯ್ಲಾದ ತಕ್ಷಣವೇ ರೈತರು ತಮ್ಮ ಸಣ್ಣ ಪುಟ್ಟ ಸಾಲ ಹಾಗೂ ಇತರೇ ಹಣಕಾಸಿನ ಬೇಡಿಕೆಗಳನ್ನು ತೀರಿಸಲು ಉತ್ಪನ್ನಗಳನ್ನು ಆದಷ್ಟು ಬೇಗನೆ ಮಾರಾಟ ಮಾಡುವ ವಾಡಿಕೆ ಪ್ರಮುಖವಾಗಿ ಸಣ್ಣ ಮತ್ತು ಅತೀ ಸಣ್ಣ ರೈತರಲ್ಲಿ ಕಂಡುಬರುವುದು.
- ಇದಲ್ಲದೇ, ರೈತರಲ್ಲಿ ಸ್ವಂತ ಶೇಖರಣಾ ವ್ಯವಸ್ಥೆ ಇಲ್ಲದೇ ಇರುವುದರಿಂದ ಉತ್ಪನ್ನಗಳನ್ನು ಅನಿವಾರ್ಯವಾಗಿ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಬೆಲೆ ಕಡಿಮೆ ಇದ್ದರೂ ಸಹ ಮಾರಾಟ ಮಾಡುವ ಪರಿಸ್ಥಿತಿ ಅನಿವಾರ್ಯವಾಗಿರುವುದು.
- ಇದರಿಂದಾಗಿ, ಮಾರುಕಟ್ಟೆಯಲ್ಲಿ ಉತ್ಪನ್ನದ ಸರಬರಾಜು ಅತೀಯಾಗಿ ಬೆಲೆಗಳು ಕುಸಿಯುತ್ತವೆ.
- ರೈತರು ತಮ್ಮ ಉತ್ಪನ್ನಗಳನ್ನು ಹತಾಶ ಸ್ಥಿತಿಯಲ್ಲಿ ಮಾರಾಟ ಮಾಡುವುದನ್ನು ತಪ್ಪಿಸಿ, ರೈತರಿಗೆ ಸುಗ್ಗಿಯ ಕಾಲದಲ್ಲಿ ಆರ್ಥಿಕ ಸೌಲಭ್ಯವನ್ನು ಒದಗಿಸಲು ಕರ್ನಾಟಕ ಸರ್ಕಾರದ ಕರ್ನಾಟಕ ಕೃಷಿ ಮಾರಾಟ ಮಹಾಮಂಡಳಿಯು ಕೃಷಿ ಉತ್ಪನ್ನ ಅಡಮಾನ ಸಾಲ ಯೋಜನೆಯನ್ನು ರೂಪಿಸಿ ಜಾರಿಗೆ ತಂದಿದೆ.

**ಕೃಷಿ ಅಡಮಾನ ಸಾಲ ಯೋಜನೆಯ ಉದ್ದೇಶಗಳು :**

- ಈ ಯೋಜನೆಯನ್ವಯ ಕೃಷಿ ಉತ್ಪನ್ನಗಳಿಗೆ ಉತ್ತಮ ದರ ದೊರೆಯದೇ ಬೆಲೆ ಕುಸಿದಾಗ ರೈತರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಮಾರುಕಟ್ಟೆ ಸಮಿತಿಗಳಲ್ಲಿ ಪ್ರತ್ಯೇಕ ಆವರ್ತ ನಿಧಿಯನ್ನು ಕ್ರೋಢೀಕರಿಸಿ, ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆ ಸಮಿತಿಗಳಲ್ಲಿ ಅಡವಿಟ್ಟು ಅಲ್ಪಾವಧಿ ಮುಂಗಡ ಸಾಲ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ.
- ಕೃಷಿ ಅಡಮಾನ ಸಾಲವನ್ನು ಕೇಂದ್ರ ಅಥವಾ ರಾಜ್ಯ ಉಗ್ರಾಣ ನಿಗಮಗಳು ಹಾಗೂ ತಾಲ್ಲೂಕ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಗೋದಾಮುಗಳಲ್ಲಿ ಉತ್ಪನ್ನಗಳನ್ನು ದಾಸ್ತಾನು ಮಾಡಿದ ರಶೀದಿಯ ಆಧಾರದ ಮೇಲೆಯೂ ಸಹ ಸಾಲವನ್ನು ಪಡೆಯಬಹುದು.

## ಕೃಷಿ ಅಡಮಾನ ಸಾಲ ಯೋಜನೆಯ ಮುಖ್ಯಾಂಶಗಳು

• ಉತ್ಪನ್ನಗಳ ಮೌಲ್ಯದ ಶೇಕಡಾ 60 ರಷ್ಟನ್ನು ಅಡಮಾನ ಸಾಲವಾಗಿ ನೀಡಲಾಗುವುದು.

• ಗರಿಷ್ಠ ಸಾಲದ ಮಿತಿ ರೂ. 2,00,000/– ರವರೆಗೆ.

• ಮೊದಲು 90 ದಿನಗಳಿಗೆ ಬಡ್ಡಿ ರಹಿತ ಸಾಲ, ತದನಂತರದ ದಿನಗಳಿಗೆ ಸಾಲ ಮೊತ್ತಕ್ಕೆ ಅನುಗುಣವಾಗಿ ಬಡ್ಡಿಯ ದರ ಈ ಕೆಳಗಿನಂತಿದೆ :

| | |
|---|---|
| ರೂ. 25,000/– ದ ವರೆಗೆ | – 4% |
| ರೂ. 25,000/– ರಿಂದ 50,000/– ವರೆಗೆ | – 6% |
| ರೂ. 50,000/– ರಿಂದ 1,00,000/– ವರೆಗೆ | – 8% |
| ರೂ. 1,00,000/– ರಿಂದ 2,00,000/– ವರೆಗೆ | – 10% |

• ಸಾಲದ ಮರುಪಾವತಿಯನ್ನು 180 ದಿನಗಳೊಳಗೆ ಮಾಡಬೇಕು.

• ಅಡವಿಟ್ಟ ಉತ್ಪನ್ನಗಳನ್ನು 180 ದಿನಗಳೊಳಗೆ ಬಿಡಿಸಿಕೊಳ್ಳದಿದ್ದಲ್ಲಿ ಮಾರುಕಟ್ಟೆ ಸಮಿತಿಯ ವತಿಯಿಂದ ಅದನ್ನು ಹರಾಜು ಅಥವಾ ಟೆಂಡರ ಮೂಲಕ ಮಾರಾಟ ಮಾಡಿ ಸಾಲ, ಬಡ್ಡಿ ಮತ್ತು ಇತರೆ ವೆಚ್ಚಗಳನ್ನು ಮುರಿದುಕೊಂಡು ಉಳಿದ ಹಣವನ್ನು ವಾಪಸ್ಸು ಮಾಡಲಾಗುವುದು.

• ರೈತರ ಉತ್ಪನ್ನಗಳನ್ನು ಅಡವಿಟ್ಟಕೊಂಡ ಸಂಸ್ಥೆಗಳು, ಈ ಉತ್ಪನ್ನಗಳ ರಕ್ಷಣೆಯ ಪೂರ್ಣ ಹೊಣೆಗಾರಿಕೆಯನ್ನು ಹೊರುತ್ತವೆ.

## ಮುಂಗಡ ಸಾಲ ಪಡೆಯಲು ರೈತರು ಅನುಸರಿಸಬೇಕಾದ ಕ್ರಮಗಳು :

• ಅಡಮಾನ ಸಾಲಕ್ಕಾಗಿ ತರುವ ಉತ್ಪನ್ನಗಳನ್ನು ಸರಿಯಾಗಿ ಒಣಗಿಸಿ, ಸ್ವಚ್ಛಗೊಳಿಸಿ ಕಸಕಡ್ಡಿಗಳನ್ನು ಬೇರ್ಪಡಿಸಿ, ಸಂಗ್ರಹಣಾ ಯೋಗ್ಯ ರೂಪದಲ್ಲಿ ತರಬೇಕು.

• ಅಡಮಾನ ಇಡುವ ಮುನ್ನ ಉತ್ಪನ್ನಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯವರು ನೀಡುವ ದಾಖಲಾತಿಗಳನ್ನು ಸೂಕ್ತ ರೀತಿಯಲ್ಲಿ ಇಟ್ಟುಕೊಂಡು ಉತ್ಪನ್ನಗಳನ್ನು ಬಿಡುಗಡೆ ಮಾಡಿಕೊಳ್ಳುವ ಸಂದರ್ಭದಲ್ಲಿ ಹಾಜರು ಪಡಿಸಬೇಕು.

• ಸಂಬಂಧಿಸಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ನಿಗದಿಪಡಿಸಿದ ಎಲ್ಲಾ ನಿಯಮಗಳನ್ನು ಸಂಪೂರ್ಣವಾಗಿ ಪಾಲಿಸಬೇಕು.

**ಕೇಂದ್ರ ಮತ್ತು ರಾಜ್ಯ ಉಗ್ರಾಣಗಳಿಂದ ರೈತರಿಗೆ ದೊರೆಯುವ ಪ್ರಯೋಜನಗಳು :**

- ರೈತರಲ್ಲಿ ಸ್ವಂತ ಕೃಷಿ ಉತ್ಪನ್ನಗಳ ದಾಸ್ತಾನು ಮಳಿಗೆಗಳು ಇರದೇ ಇದ್ದಲ್ಲಿ ಕೇಂದ್ರ ಅಥವಾ ರಾಜ್ಯ ಉಗ್ರಾಣಗಳ ಅನಕೂಲತೆಗಳನ್ನು ಪಡೆಯಬಹುದು.
- ಉಗ್ರಾಣಗಳಲ್ಲಿ ಸರಕುಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸುವುದರ ಜೊತೆಗೆ ರೈತರಿಗಾಗಿ ಸಂಗ್ರಹಣಾ ಶುಲ್ಕದಲ್ಲಿ ಶೇಕಡಾ 15 ರಷ್ಟು ರಿಯಾಯಿತಿಯು ಲಭ್ಯವಿದೆ.
- ರೈತರು ತಾವು ರಾಜ್ಯ ಉಗ್ರಾಣಗಳಲ್ಲಿ ಸಂಗ್ರಹಿಸಿದ ಸರಕುಗಳನ್ನು ಸ್ಥಳಾಂತರಗೊಳಿಸದೆ ಹಸ್ತಾಂತರಗೊಳಿಸಿ, ಮಾರಾಟ ಮಾಡುವ ವಿಶೇಷ ಸೌಲಭ್ಯವಿರುವುದು.
- ಉತ್ಪನ್ನಗಳನ್ನು ಉಗ್ರಾಣದಲ್ಲಿ ದಾಸ್ತಾನು ಮಾಡಿದಾಗ ನೀಡುವ ದಾಸ್ತಾನು ರಶೀದಿಯನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅಡವಿಟ್ಟು ಕೃಷಿ ಅಡಮಾನ ಸಾಲವನ್ನು ಪಡೆದು ತಮ್ಮ ತುರ್ತು ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :**

1. ಕೃಷಿ ಅಡಮಾನ ಸಾಲ ಯೋಜನೆ : ಸಮೀಪದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (APMC).
2. ರಾಜ್ಯ ಉಗ್ರಾಣಗಳಿಂದ ರೈತರಿಗೆ ದೊರೆಯುವ ಪ್ರಯೋಜನಗಳು : ಸಮೀಪದ ರಾಜ್ಯ ಉಗ್ರಾಣ ನಿಗಮ ಶಾಖೆ.

ಪ್ರಕಟಣೆ :
ತೋಟಗಾರಿಕಾ ವ್ಯವಹಾರ ಹಾಗೂ ರಘು ಜ್ಞಾನ ಕೇಂದ್ರ, ತೋ. ವಿ. ವಿ. ಬಾಗಲಕೋಟ